(ಸದನವು ಒಂದು ಗಂಟೆ ನಲವತ್ತೆರಡು ನಿಮಿಷಕ್ಕೆ ಒಂದು ಗಂಟೆಯ ಅವಧಿಗೆ ಮುಂದೂಡಲಾಯಿತು.)

(ಸಭೆಯು 3.55 ನಿಮಿಷಕ್ಕೆ ಪ್ರಾರಂಭವಾಯಿತು)

ಶ್ರೀ ಸಿ. ಭೈರೇಗೌಡ : ಮಾನ್ಯ ಉಪಾಧ್ಯಕ್ಷರೇ, ಕರ್ನಾಟಕ ರಾಜ್ಯ ಕರಡು ಕೃಷಿ ನೀತಿಯನ್ನು ಮಂಡನೆ ಮಾಡಲು ನಾನು ತಮ್ಮ ಅನುಮತಿಯನ್ನು ಕೋರುತ್ತಿದ್ದೇನೆ.

ಉಪಾಧ್ಯಕ್ಷರು : ಮಂಡಿಸಬಹುದು.

ಶ್ರೀ ಸಿ. ಭೈರೇಗೌಡ : ಮಾನ್ಯ ಅಧ್ಯಕ್ಷರೇ, ಸರ್ಕಾರದ ಕೃಷಿ ನೀತಿಯನ್ನು ಸದನದ ಮುಂದೆ ಮಂಡಿಸಿದ್ದೇನೆ.

ಉಪಾಧ್ಯಕ್ಷರು : ಮಂಡಿಸಲಾಯಿತು.

ಶ್ರೀ ಪಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ಹಕ್ಕುಚ್ಯುತಿ ನಿರ್ಣಯ ಇರುವಾಗ ಕೃಷಿನೀತಿಯನ್ನು ಮಂಡಿಸಬಹುದೇ?

ಶ್ರೀ ಸಿ. ಭೈರೇಗೌಡ : ಮಂಡಿಸಿ ಆಯಿತು.

ಶ್ರೀ ವಾಟಾಳ್ ನಾಗರಾಜ್ : ನೀವು ಇಲ್ಲಿದ್ದವರು ದಾರಿ ತಪ್ಪಿದಿರಿ.

ಶ್ರೀ ಸಿ. ಭೈರೇಗೌಡ : ನಾನು ತಪ್ಪಿದ್ದರೆ ಅದು ನಿಮ್ಮಿಂದ.

ಉಪಾಧ್ಯಕ್ಷರು : ಈಗ ಹಕ್ಕುಚ್ಯುತಿ ನಿರ್ಣಯದ ಮೇಲೆ ಮಾನ್ಯ ನಂಜೇಗೌಡರು ಮಾತನಾಡಲಿ.

ಹಕ್ಕುಚ್ಯುತಿ ನಿರ್ಣಯ

ಮಾನ್ಯ ವಿರೋಧ ಪಕ್ಷದ ನಾಯಕರು ಕಾಂಗ್ರೆಸ್ (ಐ) ಬಗ್ಗೆ ಆಪಾದನೆ ಮಾಡಿರುವ ಬಗ್ಗೆ - ಮುಂದುವರೆದ ಚರ್ಚೆ

+ಶ್ರೀ ಜೆಚ್.ಎನ್. ನಂಜೇಗೌಡ (ಬಸವನಗುಡಿ) : ಮಾನ್ಯ ಉಪಾಧ್ಯಕ್ಷರೇ, ಸಭೆಯ ಮುಂದೆ ನಮ್ಮ ಪಕ್ಷದ ನಾಯಕರ ವಿರುದ್ಧ ಹಕ್ಕುಚ್ಯುತಿಯನ್ನು ಮಂಡಿಸುವುದಕ್ಕೆ ಅನುಮತಿ ಕೇಳಿ ಪ್ರಿಲಿಮಿನರಿಸಬಮಿಷನ್ ಅನ್ನು ಮಾಡಿದ್ದಾರೆ ಎಂದು ನನ್ನ ಮನ್ನಸ್ಸಿಗೆ ನೋವಾಯಿತು ಖಿರ್ಗೆಯವರೇ ಈಗ ನಾವು ನಾಯಕರ ಮೇಲೆ ಹಕ್ಕುಚ್ಯುತಿ ನಿರ್ಣಯ ಬಂದಿದೆ ಅಂದರೆ ಅವರು ಅಪರಾಧಿಗಳು ನಮ್ಮ ನಾಯಕರ ಮೇಲೆ ನಾವು ಅಪರಾಧಿಗಳು. ಕೋರ್ಟಿನಲ್ಲಿ ಇರುವ ಪದ್ಧತಿ ಈಗ ಫಿರ್ಯಾದು ಕೊಡು ಅಂತ ಕೊಡುತ್ತಾರೆ. ಬಹುಶಃ ಜಡ್ಜ ಬರದೇ ಇದ್ದರೂ ಸಹ ಅದು ದಾಖಲಾತಿಯಲ್ಲಿ ಇರುತ್ತದೆ. ವಾಸ್ತವವಾಗಿ ಜಡ್ಜ ಕೇಳಬೇಕಾಗಿರತಕ್ಕಂಥಾದ್ದು ಅಪರಾಧಿಗಳ ಅಹವಾಲುಗಳನ್ನು. ಅವರ ಮನೋವೇದನೆ ಹೇಗೆ ಇರುತ್ತದೆ. ಅವರ ಮುಖಭಾವ ಹೇಗೆ ಇರುತ್ತದೆ. ಬೆನಫಿಟ್ ಆಫ್ ಡೌಟ್ ಯಾರಿಗೆ